

# ಸಿಗ್ನಲ್ ಮರ



ಇದೇನಿದು ರಸ್ತೆಯ ಮಧ್ಯೆ ಮಾನವ ನಿರ್ಮಿತ ಮರ! ಅದೂ ಮೈ ತುಂಬಾ ಕೆಂಪು, ಹಸಿರು, ಹಳದಿ ಬಣ್ಣಗಳ ದೀಪಗಳು ಅರಳಿವೆ! ಎಂಟು ಮೀಟರ್ ಎತ್ತರದ ಈ ಟ್ರಾಫಿಕ್ ಮರವನ್ನು ನೋಡಿದರೆ, ಥೇಟ್ ಬೋಳಾದ ಮರವೊಂದು ಚಿಗುರಿ ಹೂವರಳಿಸಿಕೊಂಡು ನಿಂತಂತೆ ಕಾಣುತ್ತಿದೆಯಲ್ಲ?

ಈ ಟ್ರಾಫಿಕ್ ಸಿಗ್ನಲ್ ಮರವನ್ನು ಲಂಡನ್ನಿನ ಕ್ಯಾನರಿವಾರ್ಫ್ ಬಳಿಯ ಸರ್ಕಲ್‌ನಲ್ಲಿ ಪಾರ್ಕ್ ಮಾಡಲಾಗಿದೆ. ಅತ್ಯಂತ ಹೆಚ್ಚು ಹಣಕಾಸಿನ ಚಟುವಟಿಕೆಗಳು ನಡೆಯುವ ಸ್ಥಳವಿದು.

1998ರಲ್ಲಿ ಸ್ಥಾಪನೆಗೊಂಡ ಈ ಟ್ರಾಫಿಕ್ ಮರದಲ್ಲಿ 75 ಸೆಟ್ ದೀಪಗಳನ್ನು ಅಳವಡಿಸಲಾಗಿದೆ. ಪ್ರತಿಯೊಂದು ದೀಪವನ್ನೂ ಕಂಪ್ಯೂಟರ್‌ನಿಂದ ಕಂಟ್ರೋಲ್ ಮಾಡಲಾಗುತ್ತಿದೆ. ಪ್ರವಾಸಿಗರಿಗೆ ದಿಕ್ಕು ತಪ್ಪಿಸಿ, ಬೆರಗನ್ನು ಉಂಟು ಮಾಡುವ ಈ 'ಟ್ರಾಫಿಕ್ ಲೈಟ್ ಮರ'ವನ್ನು ನಿರ್ಮಿಸಿದ್ದು ಫ್ರೆಂಚ್ ದೇಶದ ಪಿರ್ರೆ ವಾಂಟ್ ಎಂಬ ಕಲಾವಿದ.

■ ವಿದ್ಯಾ ಹಾಲಭಾವಿ